# “ಯಶೋಗಾಥೆ”

## ಸರ್ಕಾರಿ ಪೌಢಶಾಲೆ, ಹೆಬ್ಬಗೋಡಿ
## ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ದಕ್ಷಿಣ ಜಿಲ್ಲೆ,
## ಕರ್ನಾಟಕ -560099

**“ನಾವೂ ಯಾರಿಗೂ ಕಡಿಮೆಯಿಲ್ಲ, ಹೆಬ್ಬಗೋಡಿ ಶಾಲೆಯೆಂದರೆ ಸುಮ್ಮನೆ ಅಲ್ಲ”**

ನನ್ನ ಶಾಲೆ ನನ್ನ ಕೊಡುಗೆ



**ಶಾಲೆಯ ಪರಿಚಯ:**

ಸರ್ಕಾರಿ ಪೌಢಶಾಲೆ ಹೆಬ್ಬಗೋಡಿಯು **1998** ರಲ್ಲಿ ಸ್ಥಾಪನೆಯಾಯಿತು. ಪ್ರಸ್ತುತ ಈ ಶಾಲೆಯ ಆವರಣದಲ್ಲಿ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆ ಎರಡೂ ಒಂದೇ ಕಾಂಪೌಂಡಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಪ್ರಾಥಮಿಕ ಶಾಲೆಯ ಮಕ್ಕಳನ್ನೂ ಸೇರಿ ಒಟ್ಟೂ **1300** ಮಕ್ಕಳು ಅಭ್ಯಾಸ ಮಾಡುತ್ತಿದ್ದಾರೆ. ಇದರಲ್ಲಿ **610** ಮಕ್ಕಳು ಸರ್ಕಾರಿ ಪ್ರೌಢಶಾಲೆಯಲ್ಲಿ ಕಲಿಯುತ್ತಿದ್ದಾರೆ. ಹೆಬ್ಬಗೋಡಿ ಗ್ರಾಮ ಪಂಚಾಯತಿಯಿಂದ ಈಗ **ರಾಜ್ಯದಲ್ಲೆ ದೊಡ್ಡ ನಗರಸಭೆಯಾಗಿ** ಮಾರ್ಪಾಡಾಗಿದ್ದರೂ ಇಲ್ಲಿ ಸರ್ಕಾರಿ ಶಾಲೆಯು ಖಾಸಗಿ ಶಾಲೆಗೆ ಸಮನಾಗಿ ಇರುವುದು ಹೆಮ್ಮೆಯ ವಿಷಯ. ಹೆಬ್ಬಗೋಡಿಯಲ್ಲಿ ಬಹಳ ಪ್ರತಿಷ್ಠಿತ **ಖಾಸಗಿ ಶಾಲೆಗಳು** ಕಾರ್ಯನಿರ್ವಹಿಸುತ್ತಿವೆ. ಇಂತಹ ಸ್ಪರ್ಧಾತ್ಮಕ ಸನ್ನಿವೇಶದಲ್ಲಿ ಇಷ್ಟು ಮಕ್ಕಳನ್ನು ಶಾಲೆ ಆಕರ್ಷಿಸುತ್ತಿರುವುದು ಒಂದು ಸಾಧನೆಯೇ ಸರಿ. ಈಗ ಇದು **ಬೆಂಗಳೂರು ಪಬ್ಲಿಕ್ ಶಾಲೆ**ಯಾಗಿ ಅನುಷ್ಠಾನಗೊಳ್ಳುತ್ತಿರುವುದು ಈ ಶಾಲೆಯ ಸಾಧನೆಗೆ ಮತ್ತೊಂದು ಗರಿಯಾಗಿದೆ.

# ಮುಖ್ಯ ಶಿಕ್ಷಕರ ಪರಿಚಯ



| | |
|---|---|
| ಶಾಲೆಯ ಹೆಸರು | ಸರ್ಕಾರಿ ಪೌಢಶಾಲೆ, ಹೆಬ್ಬಗೋಡಿ |
| ಶಾಲೆಯ ವಿಳಾಸ | ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ದಕ್ಷಿಣ ಜಿಲ್ಲೆ, ಕರ್ನಾಟಕ 560099 |
| ಮುಖ್ಯ ಶಿಕ್ಷಕರ ಹೆಸರು | **ಶ್ರೀ ಭೀಮಪ್ಪ .ಎಂ. ಎಸ್.** |
| ಮುಖ್ಯ ಶಿಕ್ಷಕರ ಮೊಬೈಲ್ ನಂಬರ್ | 9449502044 |
| ಮುಖ್ಯ ಶಿಕ್ಷಕರ ಇಮೇಲ್ ಐಡಿ | msbskp@gmail.com |

**ವರದಿ ಮಾಡಿಕೊಂಡಾಗ ಶಾಲೆಯಿಲ್ಲಿದ್ದ ಸ್ಥಿತಿ :**

ನಾನು ಮುಖ್ಯ ಶಿಕ್ಷಕರಾಗಿ ದಿನಾಂಕ **4-8-2022** ರಂದು ಈ ಶಾಲೆಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತೇನೆ. ಆ ಸಮಯದಲ್ಲಿ ಶಾಲೆಯ ಹೆಸರು ಉತ್ತಮವಾಗಿದ್ದರೂ ಶಾಲೆಯ ಸುತ್ತ ಮುತ್ತ ಜಾಗವು ಕಸದಿಂದ ತುಂಬಿತ್ತು. ಶಾಲೆಯ ಗೋಡೆಗಳಿಗೆ ಸುಣ್ಣ ಬಣ್ಣ ಇರಲಿಲ್ಲ.



ಮುಖ್ಯ ಶಿಕ್ಷಕರ ಕೊಠಡಿಯು ಬಹಳ ಅನುಪಯೋಗಿ ವಸ್ತುಗಳಿಂದ ತುಂಬಿ ಬಹಳ ಇಕ್ಕಟ್ಟಿನಿಂದ ಕೂಡಿತ್ತು. ಶಾಲೆಯ **3 ಕೊಠಡಿ**ಗಳಲ್ಲಿ ಹಲವಾರು ತ್ಯಾಜ್ಯ ವಸ್ತುಗಳಿಂದ ಕೂಡಿದ್ದು ಕೊಠಡಿಗಳನ್ನು ಉಪಯೋಗಿದೆ ಬೀಗ ಹಾಕಲಾಗಿತ್ತು.

ಕಟ್ಟಡದ ಟೆರೇಸ್ ಮೇಲೆ ಬಹಳ ವರ್ಷಗಳಿಂದ ತೆಗೆಯದೇ ಇರುವ ಕಸದಿಂದ ಕೂಡಿದ್ದು ಸುಮಾರು 10 ಕೊಠಡಿಗಳು ಮಳೆಗಾಲದಲ್ಲಿ ಸೋರುತಿದ್ದವು.

ಕಟ್ಟಡದ ಎಡಭಾಗದಲ್ಲಿ ಹಲವಾರು ಮರಗಳಿದ್ದು ಜಾಗವು ಬಹಳ ತಗ್ಗು ಇದ್ದು ನೀರು ನಿಲ್ಲುತ್ತಿತ್ತು. ಗ್ರಂಥಾಲಯ ಮತ್ತು ಪ್ರಯೋಗಾಲಯಗಳು ಉಪಯೋಗಿಸುತ್ತಿರಲಿಲ್ಲ. ಕುಡಿಯುವ ನೀರು ಹಾಗೂ ಕೈತೊಳೆಯವ ಘಟಕಗಳ ವ್ಯವಸ್ಥೆ ಇರಲಿಲ್ಲ. ಇನ್ನು ಹಲವಾರು ಸಮಸ್ಯೆಗಳಿದ್ದವು.

## <u>ಭಾಗ-1</u>

## ಭೌತಿಕ ಪ್ರಗತಿ

**<u>ಕೈಗೊಂಡ ಕಾರ್ಯಗಳು:-</u>**








ಮುಖ್ಯ ಶಿಕ್ಷಕರ ಕೊಠಡಿಯಲ್ಲಿರುವ ತ್ಯಾಜ್ಯವನ್ನು ಹೊರಹಾಕಿ ಅದನ್ನು ಸ್ವಚ್ಛಗೊಳಿಸಿ, ಎಲ್ಲ ಗೋಡೆಗಳನ್ನು ಹಾವಸೆಯಿಂದ (ಪಾಚಿ) ಮುಕ್ತಗೊಳಿಸಿ, ಸ್ವತಃ ನಾನು ಮತ್ತು ಇಬ್ಬರು ಶಿಕ್ಷಕರೊಂದಿಗೆ ಕೊಠಡಿಗೆ ಬಣ್ಣ ಬಳಿದೆವು. ಅಲ್ಲದೆ ಕೊಠಡಿಯಲ್ಲಿ ಅಗತ್ಯವಾದ ಸಂಪನ್ಮೂಲಗಳು ಸಿಗುವಂತೆ ಕಪಾಟು(ಅಲ್ಮೆರಾ) ಮತ್ತು ಫಲಿತಾಂಶ ಮತ್ತು ಮುಖ್ಯ ಶಿಕ್ಷಕರ ಮಾಹಿತಿ ಸಿಗುವಂತೆ ಬೋರ್ಡ್‌ಗಳನ್ನು ಬರೆದು ವಿಶಾಲವಾದ ಕಛೇರಿಯನ್ನಾಗಿ ನಿರ್ಮಿಸಲಾಯಿತು. ಸಂವಿಧಾನದ ಪ್ರಸ್ತಾವನೆಯನ್ನು ಮುಖ್ಯ ಶಿಕ್ಷಕರ ಕೊಠಡಿಯಲ್ಲಿ ಹಾಗೂ ಹೊರಗೋಡೆಯಲ್ಲಿ ಎಲ್ಲರಿಗೂ ಕಾಣುವಂತೆ ಹಾಕಲಾಯಿತು. ಶಿಕ್ಷಕರ ಸೇವಾ ಮಾಹಿತಿಯನ್ನು ಕಪ್ಪು ಹಲಗೆಯಲ್ಲಿ ಬರೆಯಲಾಯಿತು. ಇದರಂತೆಯೇ ಸಿಬ್ಬಂದಿ ಕೊಠಡಿಯನ್ನು ಕೂಡ ಎಲ್ಲ ತ್ಯಾಜ್ಯಗಳಿಂದ ಮುಕ್ತಗೊಳಿಸಿ ಬಣ್ಣವನ್ನು ಬಳಿದು ಸುಂದರ ಹಾಗೂ ಆಹ್ಲಾದಾಯಕವಾಗಿ ಇರುವಂತೆ ಮಾಡಿದೆ.

## ❖ ಹಳೆಯ ವಿದ್ಯಾರ್ಥಿಗಳ ಸಹಕಾರ:



ಈ ಎಲ್ಲ ಮಾಹಿತಿಯನ್ನು ತಿಳಿದ ಹಳೇ ವಿದ್ಯಾರ್ಥಿಗಳು ಒಗ್ಗೂಡಿ ಶಾಲೆಗೆ ಬಂದು, ನನ್ನನ್ನು ಅಭಿನಂದಿಸಿ “ **ನಮ್ಮ ಶಾಲೆ ನಮ್ಮ ಹೆಮ್ಮೆ**” ಎಂಬ ಗುಂಪನ್ನು ರಚಿಸಿ ಕೊಠಡಿಗಳಿಗೆ ಬಣ್ಣ ಬಳಿಯುವ ಕಾರ್ಯವನ್ನು ಪ್ರಾರಂಭಿಸಿದರು. ಎಲ್ಲ ಹಳೇ ವಿದ್ಯಾರ್ಥಿಗಳು ಸುಮಾರು 80,000 ರೂಗಳಷ್ಟು ಹಣ ಸಂಗ್ರಹಿಸಿ ಇಡೀ ಶಾಲೆಯ ಕಟ್ಟಡಕ್ಕೆ ಬಣ್ಣವನ್ನು ಮಾಡಿ ದರು. ಹಣದ ಸಂಗ್ರಹ ಮತ್ತು ವೆಚ್ಚವನ್ನು ದಾಖಲಿಸಿ ಒಂದು ವರದಿಯನ್ನು ಕೂಡ ರಚಿಸಲಾಯಿತು.

## ❖ ವರ್ಲಿ ಲಿಪಿ/ಹಸೆ ಚಿತ್ತಾರ:



ಶಾಲೆಯ ಬಣ್ಣದ ನಂತರ, **ಚಿಲ್ಡ್ರನ್ ಆಫ್ ಇಂಡಿಯಾ ಫಡೆರೇಶನ್** ಅವರ ಸಹಾಯದಿಂದ ಶಾಲೆಯ ಮುಂಬಾಗದ ಗೋಡೆಗಳ ಮೇಲೆ ವರ್ಲಿ / ಹಸೆ ಚಿತ್ತಾರವನ್ನು ರಚಿಸಿ ಸುಂದರಗೊಳಿಸಲಾಯಿತು .

❖ **<u>ಕೈ ತೊಳೆಯುವ ಘಟಕ:</u>**




ಸುಮಾರು 610 ಮಕ್ಕಳಿಗೆ ಇಸ್ಕಾನ್ ಸಂಸ್ಥೆಯಿಂದ ಬಿಸಿಯೂಟ ಸರಬರಾಜು ಆಗುತ್ತಿದ್ದು, ಊಟವಾದ ಮೇಲೆ ಕೈ ಮತ್ತು ತಾಟು(ಪ್ಲೇಟು) ತೊಳೆಯಲು ನಲ್ಲಿಗಳ ವ್ಯವಸ್ಥೆ ಇರದಿರುವುದನ್ನು ಗಮನಿಸಿ ಮೊಮೆಂಟಿವ್ ಸಂಸ್ಥೆಗೆ ಮನವಿ ಮಾಡಿಕೊಂಡು, ಅವರನ್ನು ಒಪ್ಪಿಸಿ ಸುಮಾರು 2,00,000/- ರೂಗಳ ವೆಚ್ಚದ ಆಧುನಿಕವಾಗಿರುವ 12 ನಲ್ಲಿಗಳ ಕೈತೊಳೆಯುವ ಘಟಕವನ್ನು ನಿರ್ಮಿಸಲಾಯಿತು.

❖ **ಕುಡಿಯುವ ನೀರಿನ ಘಟಕ:**




ಅದೇ ರೀತಿ, ಇವೆಲ್ಲ ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು **ಸುಪ್ರಜಿತ್ ಫೌಂಡೇಶನ್** ಅವರಿಗೆ ಮನವಿ ಮಾಡಿ ಅವರ ಸಹಾಯದಿಂದ **2,00,000/-** ರೂಗಳ ಹೊಸ ಆಧುನಿಕ **ಆರ್ ಒ ಘಟಕವನ್ನು** ನಿರ್ಮಿಸಲಾಯಿತು. ಮತ್ತು ಮಕ್ಕಳ ಸಂಖ್ಯೆಗನುಗುಣವಾಗಿ ಇದು ಸಾಕಾಗದೆ, ಇನ್ನೊಂದು ಘಟಕಕ್ಕೆ ಮನವಿಯನ್ನು ನೀಡಿದ್ದು ಅದೂ ಕೂಡ ಒಪ್ಪಿಗೆ ನೀಡಿರುತ್ತಾರೆ.

- **ಶಾಲೆಯ ಹೆಬ್ಬಾಗಿಲು ನಿರ್ಮಾಣ:**



ಮೆಟ್ರೋದವರ ಸಹಾಯದಿಂದ ಶಾಲಾ ಮುಂಭಾಗದಲ್ಲಿ ಒಂದು ಹೆಬ್ಬಾಗಿಲನ್ನು ನಿರ್ಮಿಸಿಲು ಪ್ರಯತ್ನಿಸಿ, ಸಫಲವಾಯಿತು. ಇದು ಪ್ರಗತಿಯ ಹಂತದಲ್ಲಿ ಇರುತ್ತದೆ.

- **ಆಳವಾದ ಗುಂಡಿಗೆ ಮಣ್ಣನ್ನು ತುಂಬಿಸುವುದು**



ಶಾಲೆಯ ಪಕ್ಕದಲ್ಲಿರುವ ಮೈದಾನದಲ್ಲಿರುವ ತಗ್ಗು ಪ್ರದೇಶವನ್ನು ಸಮತಟ್ಟು ಮಾಡಲು ಮೆಟ್ರೋದವರ ಸಹಾಯದಿಂದ ಮಣ್ಣು ಹಾಕಿಸಿ, ಜೆ.ಸಿ.ಬಿ ಯ ಮೂಲಕ ಸಮತಟ್ಟು ಮಾಡಲಾಯಿತು.

- **ನಾಮಫಲಕ ಅಳವಡಿಸಿರುವುದು:**







ಶಾಲೆಯ ಎಲ್ಲ ಕೊಠಡಿಗಳಿಗೆ **ತರಗತಿ, ವಿಭಾಗ ಮತ್ತು ಮಾಧ್ಯಮವನ್ನು** ಸೂಚಿಸುವ ಕೊಠಡಿಗಳ ಮುಂದೆ ನಾಮಫಲಕವನ್ನು ಹಾಕಿಸಲಾಗಿದೆ.

❖ **ಸಿ.ಸಿ.ಕ್ಯಾಮೆರಾ ಅಳವಡಿಸುವಿಕೆ:**



ನಾನು ಬಂದ ಸಮಯದಲ್ಲಿ ಮಕ್ಕಳಲ್ಲಿ ಅನುಚಿತ ಮತ್ತು ವಯಸ್ಸಿಗೆ ತಕ್ಕುದಲ್ಲದ ವರ್ತನೆಗಳು ಕಂಡು, ಅವುಗಳನ್ನು ತಡೆಯಲು **ಚಿಲ್ಡ್ರನ್ ಆಫ್ ಇಂಡಿಯಾ ಫೌಂಡೇಶನ್** ಅವರ ವತಿಯಿಂದ 70000/- ರೂ ಗಳ ವೆಚ್ಚದಲ್ಲಿ **ಸಿ.ಸಿ.ಟಿ.ವಿ** ಯನ್ನು ಹಾಕಿಸಿ ಶಿಸ್ತನ್ನು ತರಲು ಯಶಸ್ವಿಯಾಗಿದ್ದೇನೆ. ಈಗ ಅನುಚಿತ ವರ್ತನೆಗಳು ಪೂರ್ಣ ಕಡಿಮೆಯಾಗಿದೆ.

❖ **ಬೆಲ್ ಅಳವಡಿಸುವುದು :**




ನಮ್ಮಲ್ಲಿರುವ ಒಟ್ಟು 12 ವಿಭಾಗಗಳಿಗೂ ಕೇಳಿಸುವ ಹಾಗೆ 2- ಬೆಲ್‌ಗಳನ್ನು ಅಳವಡಿಸಲಾಗಿದೆ. ಬೆಲ್ ಬಾರಿಸಲು ಸ್ವಯಂ ಚಾಲಿತ ಉಪಕರಣವನ್ನು ಅಳವಡಿಸಲಾಗಿದೆ.

❖ **ಕೊಠಡಿ ಸೋರುವಿಕೆ ನಿಯಂತ್ರಣ :**



ನಾನು ಈ ಶಾಲೆಗೆ ಬಂದ ಸಮಯದಲ್ಲಿ 10 ಕೊಠಡಿಗಳು ಮಳೆಯ ಕಾರಣದಿಂದ ಸೋರುತ್ತಿದ್ದವು **ಬಾಸ್ಟಿಕ್ ಕಂಪನಿಯ** ಸಹಾಯದಿಂದ ವಾಟರ್ ಪ್ರೂಫ್ ಪೇಂಟ್‌ನ್ನು ಮಾಡಿದ್ದರಿಂದ ಈ ವರ್ಷ ಯಾವುದೇ ಸೋರುವಿಕೆ ಕಂಡುಬಂದಿರುವುದಿಲ್ಲ.

❖ **ತರಗತಿ ಕೊಠಡಿಗಳಿಗೆ ಪ್ಯಾನ್ ಅಳವಡಿಸಿರುವುದು**:

ಹಲವಾರು ತರಗತಿಗಳ ವಿದ್ಯುತ್ ಸಂಪರ್ಕ ಮತ್ತು ಉಪಕರಣಗಳು ಹಾಳಾಗಿದ್ದವು ಅವುಗಳನ್ನು ಸರಿಪಡಿಸಿ ಮತ್ತು ಫ್ಯಾನ್ ಗಳನ್ನು ಅಳವಡಿಸಲಾಗಿದೆ.



## ಭಾಗ -2

## ಶೈಕ್ಷಣಿಕ ಚಟುವಟಿಕೆಗಳು

- **ಎನ್.ಎಮ್.ಎಮ್.ಎಸ್. (NMMS)ಫಲಿತಾಂಶ:**



ನಮ್ಮ ಶಾಲೆಯ ಮಕ್ಕಳನ್ನೆ ಮೆಂಟರ್ ಅಗಿ ನೇಮಿಸಿ, ಪರಿಣಿತರನ್ನು ಕರೆಸಿ, ಮತ್ತು ನಮ್ಮ ಶಿಕ್ಷಕವೃಂದವರಿಂದ ಬೋಧನೆ ಮಾಡಿಸಿದ್ದರಿಂದ ಪ್ರತಿ ವರ್ಷವು ಸರ್ಕಾರಿ ಶಾಲೆಗಳಲ್ಲಿ ರಾಜ್ಯದಲ್ಲಿ ಫಲಿತಾಂಶವು ಪ್ರಥಮ ಸ್ಥಾನದಲ್ಲಿರುತ್ತದೆ. **2023 ರಲ್ಲಿ ಒಟ್ಟು 18** ಮಕ್ಕಳು ಉತ್ತೀರ್ಣರಾಗುವ ಮೂಲಕ ಶಾಲೆಗೆ ಹೆಮ್ಮೆ ತಂದಿರುತ್ತಾರೆ. ಈ ವರ್ಷ 30 ಕ್ಕಿಂತ ಹೆಚ್ಚು ಮಕ್ಕಳು ಅರ್ಹತೆ/ಪಾಸಾಗಬಹುದೆಂಬ ನಿರೀಕ್ಷೆಯಲ್ಲಿದ್ದೇವೆ

- **ಸಾಧನಾ ಪರೀಕ್ಷೆ:**



**ರಾಷ್ಟ್ರೋತ್ಥಾನ ಪರಿಷತ್ ನಿಂದ** ನಡೆಸುವ ಸಾಧನ ಮತ್ತು ತಪಸ್ ಪರೀಕ್ಷೆಯಲ್ಲಿ ಶಾಲೆಯಲ್ಲಿ ಈ ವರ್ಷ **ಇಬ್ಬರು** ವಿದ್ಯಾರ್ಥಿನಿಯರು ಉತ್ತೀರ್ಣರಾಗುವ ಮೂಲಕ ಹೆಮ್ಮೆ ತಂದಿರುತ್ತಾರೆ. ಇದರಿಂದ ಆ ಮಕ್ಕಳ ಮುಂದಿನ ವಿದ್ಯಾಭ್ಯಾಸದ ವೆಚ್ಚವು ಉಚಿತವಾಗಿರುತ್ತದೆ.

- **ವಿವೇಕಾ ಅನ್ವೇಷಣಾ ರಾಜ್ಯ ಮಟ್ಟದ ವಿದ್ಯಾರ್ಥಿ ವೇತನ ಪರೀಕ್ಷೆ**




**ಸ್ವಾಮಿ ವಿವೇಕಾನಂದ ಯುತ್ ಮೂವಮೆಂಟ್** ನವರು ನಡೆಸುವ ವಿದ್ಯಾರ್ಥಿವೇತನ ಪರೀಕ್ಷೆಯಲ್ಲಿ ನಮ್ಮ ಶಾಲೆಯಲ್ಲಿ ಈ ವರ್ಷ ವಿದ್ಯಾರ್ಥಿಗಳು ಆಯ್ಕೆಯಾಗುವ ಮೂಲಕ ಹೆಮ್ಮೆ ತಂದಿರುತ್ತಾರೆ.

- **ರಾಜ್ಯಪಾಲರಿಂದ ರಾಜ್ಯ ಪುರಸ್ಕಾರ ಪ್ರಶಸ್ತಿ**:




2022 ಅವಧಿಯಲ್ಲಿ ನಮ್ಮ ಶಾಲೆಯಲ್ಲಿ ಸ್ಕೌಟ್ ಮತ್ತು ಗೈಡ್ ಮಕ್ಕಳಿಂದ ಕೇವಲ **6 ವಿದ್ಯಾರ್ಥಿನಿ**ಯರು ಮಾತ್ರ ಆಯ್ಕೆ ಆಗಿದ್ದರೆ **2023** ಅವಧಿಯಲ್ಲಿ ನಮ್ಮ ಶಾಲೆಯಿಂದ ಒಟ್ಟು **23 ವಿದ್ಯಾರ್ಥಿಗಳು** ಆಯ್ಕೆಯಾಗುವ ಮೂಲಕ ನಮ್ಮ ಶಾಲೆಗೆ ಕೀರ್ತಿ ತಂದಿರುತ್ತಾರೆ.

❖ **14-ವರ್ಷದೊಳಗಿನ ರಾಷ್ಟ್ರೀಯ ಮಟ್ಟದ ಕಬ್ಬಡಿಗೆ ಆಯ್ಕೆ**

ನಮ್ಮ ಶಾಲೆಯಲ್ಲಿ ಈ ವರ್ಷ 9ನೇಯ ತರಗತಿಯ ಪದ್ಮೇಶ್ ಎಂಬ ವಿದ್ಯಾರ್ಥಿ **14 ವರ್ಷದೊಳಗಿನ ರಾಷ್ಟ್ರೀಯ ಮಟ್ಟದ ಕಬ್ಬಡಿಗೆ** ಆಯ್ಕೆಯಾಗುವ ಮೂಲಕ ಹೆಮ್ಮೆ ತಂದಿರುತ್ತಾರೆ.




❖ **ವಿದ್ಯಾರ್ಥಿ ಪೋಲೀಸ್ ಕೆಡೆಟ್:**

ನಮ್ಮ 2023 ಅವಧಿಯಲ್ಲಿ ಒಟ್ಟು 44 ಮಕ್ಕಳಿಗೆ ಪೋಲೀಸ್ ಕೆಡೆಟ್ ಗಳಿಗೆ ತರಬೇತಿ ನೀಡಲಾಯಿತು.



## ❖ ಶಾಲಾ ಗ್ರಂಥಾಲಯ ಮತ್ತು ಸಂಚಾರಿ ಗ್ರಂಥಾಲಯ:



**ಎಲ್ಸಿಯ ಅಸೋಸಿಯೇಸನ್** ನವರು ಸಂಚಾರಿ ಗ್ರಂಥಾಲಯವನ್ನು ನಮ್ಮ ಮಕ್ಕಳಿಗೆ ವಾರಕ್ಕೊಮ್ಮೆ ಒದಗಿಸುತ್ತಿದ್ದಾರೆ. ಅದು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಅನುಕೂಲವಾಗುತ್ತಿದೆ. ಮತ್ತು ನಮ್ಮಲ್ಲಿರುವ ಗ್ರಂಥಾಲಯವು ಉಪಯೋಗವಾಗದೆ ಹಾಗೆಯೆ ದೂಳು ಹಿಡಿದಿತ್ತು. ಅದರ ಮರು ಬಳಕೆಗಾಗಿ **ಮೂರು ಅಲ್ಮೇರಾಗಳನ್ನು** ಮಾಡಿಸಿ ಅದಕ್ಕಾಗಿ **ಒಂದು ಕೊಠಡಿ**ಯನ್ನು ಬಳಕೆ ಮಾಡಿಕೊಳ್ಳಲಾಯಿತು. ಅದು ಈಗ ಎಲ್ಲ ಮಕ್ಕಳಿಗೆ ಉಪಯೋಗವಾಗುತ್ತಿದೆ.

## ❖ ಸ್ಕೌಟ್ಸ್ ಮತ್ತು ಗೈಡ್ಸ್:

ನಮ್ಮ ಶಾಲೆಯಲ್ಲಿ **ಸ್ಕೌಟ್ಸ್ ಮತ್ತು ಗೈಡ್ಸ್** ವ್ಯವಸ್ಥೆ ಇದ್ದು ಇದರಲ್ಲಿರುವ ಮಕ್ಕಳು ಬಹಳ ಆಸಕ್ತಿಯಿಂದ ಭಾಗವಹಿಸುತ್ತಾರೆ. ಶಾಲೆಯ ಪ್ರತಿಯೊಂದು ಕಾರ್ಯಕ್ರಮಗಳಲ್ಲೂ ಸ್ವಯಂ **ಸೇವಕರಾಗಿ ಕಾರ್ಯ** ನಿರ್ವಹಿಸುತ್ತಾರೆ. ಇವರಿಗೆ ನೆಡೆಸುವ ರಾಜ್ಯ ಪುರಸ್ಕಾರ ಪರೀಕ್ಷೆಯಲ್ಲಿ 2022 ರಲ್ಲಿ ಕೇವಲ ಆರು ವಿದ್ಯಾರ್ಥಿನಿಯರು ಆಯ್ಕೆ ಆಗಿದ್ದರೆ, **2023 ರಲ್ಲಿ 23** ವಿದ್ಯಾರ್ಥಿಗಳು ಆಯ್ಕೆಯಾಗುವ ಮೂಲಕ ಶಾಲೆ ಹೆಮ್ಮೆ ತಂದಿರುತ್ತಾರೆ.



❖ **ಅಂತರಾಷ್ಟ್ರೀಯ ಸ್ಕೌಟ್ಸ್ ಮತ್ತು ಗೈಡ್ಸ್ ನ ಜಾಂಬೂರಿ ಸಭೆಯಲ್ಲಿ ಭಾಗಿ:**




**ಡಿಸೆಂಬರ್** 2022 **ರಲ್ಲಿ ಮೂಡಬಿದರೆಯಲ್ಲಿ ನಡೆದ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಸಭೆಗೆ ನಮ್ಮ ಮಕ್ಕಳು ಭಾಗಿಯಾಗಿ ಯಶಸ್ವಿಗೊಳಿಸಿದ್ದಾರೆ.**

❖ **ಗಣಿತ ಪ್ರಯೋಗಾಲಯ**:




ಗಣಿತ ಪ್ರಯೋಗಾಲಯಕ್ಕೆ ಪ್ರತ್ಯೇಕ ಕೊಠಡಿ ಇಲ್ಲದಿದ್ದರೂ ಅದರ ಕೆಲವು ಪರಿಕರಗಳನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಮತ್ತು ಮಕ್ಕಳಿಂದ ಮಾದರಿಗಳನ್ನು ಮಾಡಿಸಲಾಗುತ್ತಿದೆ.

## ❖ ವಿಜ್ಞಾನ ಪ್ರಯೋಗಾಲಯ:





ಮೊದಲಿದ್ದ ಪ್ರಯೋಗಾಲಯವು ಉಪಯೋಗವಾಗದೆ ಅದರಲ್ಲಿರುವ ಪರಿಕರಗಳು ದೂಳು ಹಿಡಿದಿದ್ದು ಅದನ್ನು ಸ್ವಚ್ಛಗೊಳಿಸಿ ಅದರ ಉಪಯೋಗವನ್ನು ಮಾಡಿಕೊಳ್ಳಲಾಗುತ್ತಿದೆ. ಅದನ್ನು ಒಬ್ಬ ಶಿಕ್ಷಕರಿಗೆ ಜವಾಬ್ದಾರಿಯನ್ನು ನೀಡಿ ಸತತವಾಗಿ ಬಳಕೆ ಮಾಡಲಾಗುತ್ತಿದೆ

## ❖ ಧ್ಯಾನ:



ಪ್ರತಿದಿನ ವಿದ್ಯಾರ್ಥಿಗಳಿಗೆ ಬೆಳಿಗ್ಗೆ ಪ್ರಾರ್ಥನೆಗೆ ಮೊದಲು 10 ನಿಮಿಷ ಧ್ಯಾನ ಮಾಡಿಸಲಾಗುತ್ತಿದೆ. ಇದು ಆ ದಿನದ ಕಲಿಕೆಗೆ ತುಂಬಾ ಪ್ರಯೋಜನಕಾರಿಯಾಗಿದೆ. ಮತ್ತು ಮದ್ಯಾಹ್ನ ಊಟದ ಮೊದಲು ಸಹ ಪ್ರಾರ್ಥನೆ ಮಾಡಿಸಲಾಗುತ್ತಿದೆ.

.

❖ **ಯೋಗ ತರಗತಿ ಮತ್ತು ಗಿನ್ನೀಸ್ ದಾಖಲೆಗಾಗಿ ಯೋಗದಲ್ಲಿ ಭಾಗವಹಿಸಿರುವುದು**:














ಸೆನ್ಸೆರಾ ಕಂಪನಿಯಿಂದ ವಾರಕ್ಕೆ ಒಂದು ದಿನ ಯೋಗ ಶಿಕ್ಷಕಿಯು ಹಾಜರಾಗಿ ಪ್ರತಿ ತರಗತಿಯ ಮಕ್ಕಳಿಗೆ ಯೋಗ ತರಬೇತಿ ಮಾಡಿಸಲಾಗುತ್ತಿದೆ. **ಗಿನ್ನಿಸ್ ದಾಖಲೆಗಾಗಿ ಕಂಠೀರವ ಕ್ರೀಡಾಂಗಣದಲ್ಲಿ ನಾನು ,** ಇಬ್ಬರು ಶಿಕ್ಷಕರು ಮತ್ತು ಮಕ್ಕಳು ಭಾಗಿಯಾಗಿರುವುದು.

### ❖ ಮಹಾತ್ಮ ಗಾಂಧಿ ಜಯಂತಿಯಂದು ಶ್ರಮದಾನದಿಂದ ಶಾಲೆಯ ಸ್ವಚ್ಛತೆ:



ಪ್ರತಿ ದಿನ ಶಾಲೆಯ ಮೈದಾನದಲ್ಲಿ ಎಲ್ಲಿಯೂ ಕಸ,ಎಲೆ ಮತ್ತು ಕಾಗದ ಇತರೆ ತ್ಯಾಜ್ಯ ವಸ್ತುಗಳು ಬೀಳದಂತೆ ಸ್ವಚ್ಛಗೊಳಿಸಲಾಗುತ್ತಿದೆ. ಮತ್ತು ಮಕ್ಕಳಲ್ಲಿ ಶಾಲಾ ಸ್ವಚ್ಛತೆಯ ಮತು ವಯಕ್ತಿಕ ಸ್ವಚ್ಛತೆ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಲಾಗುತ್ತಿದೆ. ಮಕ್ಕಳೂ ಸಹ ಇದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಾರೆ.

### ❖ ಮನೆ ಭೇಟಿ ಕಾರ್ಯಕ್ರಮ:



ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಮನೆಗಳಿಗೆ ಅನಿರೀಕ್ಷತವಾಗಿ ಭೇಟಿ ನೀಡಿ ಪೋಷಕರೊಂದಿಗೆ ಚರ್ಚಿಸಿ ಮಗುವಿಗೆ ಉತ್ತಮವಾಗಿ ಓದುಲು ಪ್ರೇರಣೆ ನೀಡಲಾಗುತ್ತದೆ.

## ❖ ಫಲಿತಾಂಶ ಸುಧಾರಣೆಗೆ ರಾತ್ರಿಯ ಅಭ್ಯಾಸ:







ಹತ್ತನೇಯ ತರಗತಿಯ ಫಲಿತಾಂಶ ಸುಧಾರಣೆಗೆ ಮಾರ್ಚ್ ತಿಂಗಳಲ್ಲಿ ಎಲ್ಲಾ ಮಕ್ಕಳಿಗೂ ಸಂಜೆಯ ಉಪಹಾರ ಕೊಟ್ಟು ರಾತ್ರಿ 08:30 ರವರೆಗೂ ಮಕ್ಕಳಿಗೆ ಅಭ್ಯಾಸ ಮಾಡಿಸಲಾಗುತ್ತದೆ

## ❖ ಸಾಂಸ್ಕೃತಿಕ ಚಟುವಟಿಕೆಗಳು :









ನಮ್ಮ ಶಾಲೆಯ ಮಕ್ಕಳು ಕೇವಲ ಒದಿನಲ್ಲಿ ಅಲ್ಲದೆ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಸಹ ಉತ್ತಮ ಸಾಧನೆ ಮಾಡಿದ್ದಾರೆ

- **ಕ್ರೀಡೆ :**







- **ಖಾಸಗಿ ಶಾಲೆಗೆ ಸಮನಾದ ಸಮವಸ್ತ್ರ :**

ಸರ್ಕಾರ ನೀಡಿರುವ ಸಮವಸ್ತ್ರವಲ್ಲದೆ ಶಾಲೆಯ ಉಸ್ತುವಾರಿ ಸಮಿತಿಯ ಸಹಾಯ ಪಡೆದು ಎಲ್ಲಾ ಮಕ್ಕಳಿಗೆ ಆಕರ್ಷಕವಾದ ಟ್ರ್ಯಾಕ್ ಶೂಟ್ ನ್ನು ಒದಗಿಸಲಾಗಿದೆ





## ❖ ಸಂಸ್ಥೆಗಳಿಂದ ಪ್ರೋತ್ಸಾಹಕ ನಗದು ಬಹುಮಾನ ವಿತರಣೆ:



ಹೆಬ್ಬಗೋಡಿಯ ಸುತ್ತಮುತ್ತ ಹಲವಾರು ಕಂಪನಿಗಳು ಹಾಗೂ ಫೌಂಡೇಶನ್ ಗಳು ಅಸ್ತಿತ್ವದಲ್ಲಿ ಇದ್ದು ಅವರಿಂದ ಶೇಕಡ 80 ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದ 10 ನೇ ತರಗತಿ ಮಕ್ಕಳಿಗೆ ಪ್ರೋತ್ಸಹವಾಗಿ ನಗದು ಬಹುಮಾನವನ್ನು ಕೊಡಿಸಲಾಗುತ್ತಿದೆ. ಈ ವರ್ಷ ಸುಪ್ರಜಿತ್ ಫೌಂಡೇಶನ್ ಮತ್ತು ಎಲ್ಸಿಯಾ ಅಸೋಸಿಯೇಷನ್ ನವರು ತಲಾ 10000/ ನಗದನ್ನುನೀಡಿರುತ್ತಾರೆ

## ❖ ಆನ್ ಲೈನ್ ತರಗತಿ:




ಮಕ್ಕಳಿಗೆ ದಸರಾ ರಜೆ ಸಮಯದಲ್ಲಿ ಮಕ್ಕಳ ಫಲಿತಾಂಶ ಸುಧಾರಣೆಗಾಗಿ ಗೂಗಲ್ ಮೀಟಿಂಗ್ ಆನ್ ಲೈನ್ ತರಗತಿಗಳನ್ನು ನಡೆಸಲಾಗುತ್ತಿದೆ.

### ❖ ಪೋಷಕರ ಸಭೆ:



ಫಲಿತಾಂಶ ಸುಧಾರಣೆಗಾಗಿ ತಿಂಗಳಿಗೊಮ್ಮೆ ಪೋಷಕರ ಸಭೆಯನ್ನು ನಡೆಸಲಾಗುತ್ತಿದೆ.ಪೋಷಕರೂ ಸಹ ಉತ್ತಮವಾಗಿ ಸ್ಪಂದಿಸುತ್ತಾರೆ.

### ❖ ಮಕ್ಕಳನ್ನು ಪ್ರೇರೇಪಣೆಗೊಳಿಸಲು ಪ್ರೋತ್ಸಹಕ ಬ್ಯಾಡ್ಜ್‌ಗಳನ್ನುನೀಡುವುದು:-






❖ **ಮಕ್ಕಳಿಗೆ ತಂತ್ರಜ್ಞಾನದ ತರಗತಿ/ಕಂಪ್ಯೂಟರ್ ತರಗತಿ:**




❖ **ಮಕ್ಕಳಿಗೆ ಅರ್ಥ ವಾಗದ ಸಮಸ್ಯೆಗೆ ಮಕ್ಕಳಿಂದಲೇ ಪರಿಹಾರ:**




ಕಲಿಕೆಯಲ್ಲಿ ಮುಂದಿರುವ ಮಕ್ಕಳು ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಸಮಸ್ಯೆ ಪರಿಹರಿಸುವುದು ಇಬ್ಬರಿಗೂ ಪ್ರಯೋಜನ ಮತ್ತು ಈ ಮಕ್ಕಳು ಅವರದೇ ಆದ ಭಾಷೆ, ಶೈಲಿ ಇವು ಇತರೆ ಮಕ್ಕಳಿಗೆ ಬೇಗ ಕಲಿಕೆಗೆ ಸಹಾಯವಾಗುತ್ತದೆ

❖ **ಉಪಸಂಹಾರ:**

ನಾನು **ಪದವಿ ಪೂರ್ವ ಕಾಲೇಜು(ಪ್ರೌಢಶಾಲಾ ವಿಭಾಗ) ಶಿಕಾರಿಪುರ, ಶಿವಮೊಗ್ಗ ಜಿಲ್ಲೆ** ಇಲ್ಲಿಂದ **ಸಹ ಶಿಕ್ಷಕ** ಹುದ್ದೆಯಿಂದ **ಮುಖ್ಯ ಶಿಕ್ಷಕ** ಹುದ್ದೆಗೆ ಪದೋನ್ನತಿ ಹೊಂದಿ ಈ ಶಾಲೆಗೆ **04.08.2022** ರಂದು ವರದಿ ಮಾಡಿಕೊಂಡು ಕೇವಲ **ಒಂದು ವರ್ಷ ಆರು ತಿಂಗಳಾ**ಗಿದ್ದು ಈ ಅಲ್ಪ ಅವಧಿಯಲ್ಲಿ ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ಶೈಕ್ಷಣಿಕ ಪ್ರಗತಿಗೆ ನನ್ನ ಕೈಲಾದಷ್ಟು ಶಕ್ತಿಮೀರಿ ಪ್ರಯತ್ನವನ್ನು ಮಾಡಿರುತ್ತೇನೆ. ನಾನು ಈ ಸೇವೆಯಲ್ಲಿ ಇನ್ನಷ್ಟು ಕಲಿಯುವುದು, ಮತ್ತು ಆಡಳಿತದ ವಿಷಯದಲ್ಲಿ ತಿಳಿದುಕೊಳ್ಳುವುದು ಬಹಳಷ್ಟಿದೆ. ನಾನೇನಾದರೂ ಸ್ವಲ್ಪ ಸುಧಾರಣೆ ಮಾಡಿರುವುದು ಕಂಡು ಬಂದಲ್ಲಿ ಅದಕ್ಕೆ ಈ ತಾಲೂಕಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ದಕ್ಷ ಆಡಳಿತ ನೀಡುತ್ತಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ **ಶ್ರೀ ಮತಿ ಜಯಲಕ್ಷ್ಮಿ**.**ಜೆ.ಎಂ**. ಮೇಡಮ್ ರವರ ಮಾರ್ಗದರ್ಶನದಿಂದ ಮತ್ತು ನನ್ನ **ಸಹೋದ್ಯೋಗಿ**ಗಳ ಸಹಕಾರ ಹಾಗೂ **ಎಸ್.ಡಿ.ಎಂ.ಸಿ., ಹಳೆಯ ವಿದ್ಯಾರ್ಥಿಗಳು, ಪೋಷಕರು, ಮಕ್ಕಳ ಸಹಕಾರದಿಂದ** ಮಾತ್ರ ಸಾದ್ಯವಾಗಿದೆ ಎಂದು ನನ್ನ ಆತ್ಮ ಸಾಕ್ಷಿಯಾಗಿ ಹೇಳಲು ಬಯಸುತ್ತೇನೆ.





# -:ಧನ್ಯವಾದಗಳು:-






******